# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seeommys@gmail.com

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ eys . 45 ದಿನಾಂಕ: 19.06.2017
ಲಗತ್ತು: ಫೋಟೊ ಪ್ರತಿಯೊಂದಿಗೆ

4/7/17

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 13.06.2017 ಕುಶಾಲನಗರ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಸಂಪರ್ಕ ಸಭೆಯ ನಡಾವಳಿಗಳು

ಶ್ರೀಯುತರುಗಳಾದ

1. ಶ್ರೀ ಕೆ. ರಾಮಚಂದ್ರ, ಅಧೀಕ್ಷಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ ಚಾಮರಾಜನಗರ-ಕೊಡಗು ವೃತ್ತ
2. ಶ್ರೀಮತಿ ತಾರಾ, ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ಚಾ.ವಿ.ಸ.ನಿ.ನಿ ಚಾಮರಾಜನಗರ-ಕೊಡಗು ವೃತ್ತ
3. ಶ್ರೀ ಬಿ. ಸೋಮಶೇಖರ್, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ ಮಡಿಕೇರಿ ವಿಭಾಗ
4. ಶ್ರೀ ವಿ.ಎಂ ನಾಗರಾಜು ಲೆಕ್ಕಾಧಿಕಾರಿಗಳು, ಚಾ.ವಿ.ಸ.ನಿ.ನಿ ಮಡಿಕೇರಿ ವಿಭಾಗೀಯ ಕಛೇರಿ
5. ಶ್ರೀ ಎ.ಎ ದಿನೇಶ್, ಲೆಕ್ಕಾಧಿಕಾರಿಗಳು,(ಆ.ಲೆ.ಪಂ) ಚಾ.ವಿ.ಸ.ನಿ.ನಿ ಮಡಿಕೇರಿ ವಿಭಾಗೀಯ ಕಛೇರಿ
6. ಶ್ರೀ ಎಂ.ಪಿ ಅಶೋಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕುಶಾಲನಗರ ಉಪವಿಭಾಗ.
7. ಶ್ರೀ ವಿನಯ್ ಕುಮಾರ್.ಓ.ಕೆ., ಸಹಾಯಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕುಶಾಲನಗರ ಶಾಖೆ
8. ಕುಮಾರಿ ರಾಣಿ .ಎ .ಕಿರಿಯ ಇಂಜಿನಿಯರ್(ತಾಂ), ಚಾ.ವಿ.ಸ.ನಿ.ನಿ. ಕುಶಾಲನಗರ
9. ಶ್ರೀ ಗಣೇಶ್, ಹಿರಿಯ ಸಹಾಯಕ, ಚಾ.ವಿ.ಸ.ನಿ.ನಿ ಕಂದಾಯ ಶಾಖೆ, ಕುಶಾಲನಗರ
10. ಶ್ರೀ ಬಸವರಾಜು, ಕಿರಿಯ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕೂಡಿಗೆ ಶಾಖೆ
11. ಶ್ರೀ ಪಿ.ಸಿ.ರಮೇಶ್, ಶಾಖಾಧಿಕಾರಿ (ಪ್ರಭಾರ), ಚಾ.ವಿ.ಸ.ನಿ.ನಿ., ಸುಂಟಿಕೊಪ್ಪ ಮತ್ತು ಮಾದಾಪುರ ಶಾಖೆ

ಚಾ.ವಿ.ಸ.ನಿ.ನಿ. ನಿಗಮ ಕಾರ್ಯಾಲಯ
ನಂ. 1098
ತಾ. 6/7/17
ಮೈಸೂರು

ಸಭೆಯಲ್ಲಿ ಕುಶಾಲನಗರ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಸಲಹೆ |
|---|---|---|---|
| 1 | ಸುದೀಶ್ ಗುಡ್ಡೆಹೊಸೂರು ಕುಶಾಲನಗರ | ಗುಡ್ಡೆಹೊಸೂರು ಸಮೀಪ ಇರುವ ಪಂಪ್ ಸೆಟ್‌ಗೆ ಬಂದಿರುವ ಎಲ್ ಟಿ ಮಾರ್ಗವನ್ನು ಕಳಚುವ ಬಗ್ಗೆ. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಡಲೇ ವಿದ್ಯುತ್ ಮಾರ್ಗವನ್ನು ಕಳಚಿಕೊಡಲು ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು |
| 2 | ವರದ ಶೈಲಜಾ ಬಡಾವಣೆ ಕುಶಾಲನಗರ | ಶೈಲಜಾ ಬಡಾವಣೆಯಲ್ಲಿ ವಿದ್ಯುತ್ ಕಂಬಗಳು ರಸ್ತೆಯಲ್ಲಿದ್ದು, ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದರಿಂದ ವಿದ್ಯುತ್ ಕಂಬವನ್ನು ಸ್ಥಳಾಂತರಿಸುವ ಬಗ್ಗೆ. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಕಂಬವನ್ನು ಸ್ಥಳಾಂತರಿಸುವ ಬಗ್ಗೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಿದರು. |
| 3 | ರಾಕೇಶ್ ಬೈಚನಹಳ್ಳಿ ಕುಶಾಲನಗರ | ವಸತಿ ಬಡಾವಣೆಯಲ್ಲಿ ಮನೆಗೆ ವಿದ್ಯುತ್ ಸಂಪರ್ಕವನ್ನು ತಾತ್ಕಲಿಕವಾಗಿ ತೆಗೆದುಕೊಂಡಿದ್ದು, ಅದನ್ನು ಶಾಶ್ವತವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವ ಬಗ್ಗೆ. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು 2 ವರ್ಷ ಮಾತ್ರ ತಾತ್ಕಾಲಿಕವಾಗಿ ಪಡೆಯಹುದು, ಆದರೆ ಮನೆ ಪೂರ್ಣಗೊಂಡ ಕೂಡಲೇ ತಾತ್ಕಾಲಿಕವಾಗಿ ಮುಂದುವರೆಯಲು ಸಾಧ್ಯವಿಲ್ಲ. ಸದರಿ ಗ್ರಾಹಕರಿಗೆ ನಿಮ್ಮ ವಸತಿ ಬಡಾವಣೆಯ ಡೆವಲಪರ್ಸ್ ರವರು ಕಾಮಗಾರಿ ಪೂರ್ಣಗೊಳಿಸಿದ ಕೂಡಲೇ ವಿದ್ಯುತ್ ಸಂಪರ್ಕ ನೀಡುವುದಾಗಿ ತಿಳಿಸಿದರು. |

DGM - 04 JUL 2017

AGM-DM 06/07


| | | | |
|---|---|---|---|
| 4 | ರಾಕೇಶ್<br>ಬೈಚನಹಳ್ಳಿ<br>ಕುಶಾಲನಗರ | Revenue Land ನಲ್ಲಿ ಬೋರ್‌ವೆಲ್ ಕೊರೆಯಲು ಪಂಚಾಯಿತಿಯಿಂದ NOC ಪಡೆದುಕೊಳ್ಳುವ ಬಗ್ಗೆ. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ರೆವೆನ್ಯೂ ಲ್ಯಾಂಡ್‌ಗೆ ಬೋರ್‌ವೆಲ್ ಕೊರೆಯಲು ತಹಶೀಲ್ದಾರ್ ರವರಿಂದ NOC ಪಡೆಯುವುದು ಹಾಗೂ ಮನೆಗೆ ವಿದ್ಯುತ್ ಸಂಪರ್ಕ ಪಡೆಯಲು ಪಂಚಾಯಿತಿ ರವರಿಂದ NOC ಪಡೆಯುವಂತೆ ತಿಳಿಸಿದರು. |
| 5 | ಮೇರಿ ಫಾತಿಮಾ<br>ಮುಖ್ಯೋಪಾಧ್ಯಾಯಿನಿ<br>ಶಾಂತಿನಿಕೇತನ ಶಾಲೆ<br>ಕೊಡಗರಹಳ್ಳಿ | ಟ್ರಾನ್ಸ್ ಫಾರ್ಮರ್(ಪರಿವರ್ತಕ) ಅಳವಡಿಸಿ ಕೊಡುವ ಬಗ್ಗೆ. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ವೋಲ್ಟೇಜ್ ಸಮಸ್ಯೆಗೆ ಹೊಸ ಪರಿವರ್ತಕ ಅಳವಡಿಸಲು ಸ್ಥಳವಿದ್ದರೆ, ಕೂಡಲೇ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 6 | ಕೆ. ವರದ<br>ಕೂಡ್ಲೂರು<br>ಕೈಗಾರಿಕಾ ಪ್ರದೇಶ,<br>ಕೂಡಿಗೆ | ಕೂಡ್ಲೂರು ಕೈಗಾರಿಕಾ ಪ್ರದೇಶ ಕೂಡಿಗೆ ವಿದ್ಯುತ್ ಉಪಕೇಂದ್ರ ನಿರ್ಮಾಣ ಮಾಡುವ ಬಗ್ಗೆ.ಮತ್ತು ಲೋಡ್ ಶೆಡ್ಡಿಂಗ್ ಬಗ್ಗೆ ಮಾಹಿತಿ ನೀಡುವ ಬಗ್ಗೆ | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಉಪಕೇಂದ್ರಕ್ಕೆ ಅನುಮೋದನೆಯನ್ನು ನೀಡಲಾಗಿದ್ದು, ಅದಕ್ಕೆ ಜಾಗ ಹುಡುಕುತ್ತಿರುವುದಾಗಿ ತಿಳಿಸಿದರು. ಹಾಗೂ ನಿರ್ವಹಣೆ ಕೆಲಸವಿದ್ದರೆ ಪತ್ರಿಕಾ ಪ್ರಕಟಣೆ ಮತ್ತು ಮೊಬೈಲ್ ಕರೆಗೆ ಆನ್ ಲೈನ್ ಮುಖಾಂತರ ಸಂದೇಶ ಕಳುಹಿಸುವುದಾಗಿ ತಿಳಿಸಿದರು. |
| 7 | ಯೋಗನಂದ<br>ಪಾಲಿಟೆಕ್ನಿಕ್<br>ಮಾದಾಪಟ್ಟಣ<br>ಕುಶಾಲನಗರ | ಪಾಲಿಟೆಕ್ನಿಕ್ ಬಳಿ ಇರುವ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಬೀದಿ ದೀಪಗಳ ನಿರ್ವಹಣೆ ಕಾಮಗಾರಿಯನ್ನು ಸದರಿ ವ್ಯಾಪ್ತಿಗೆ ಒಳಪಡುವ ಪಂಚಾಯಿತಿಗೆ ವಹಿಸಲಾಗಿದೆ ಹಾಗೂ ಪಂಚಾಯಿತಿ ವತಿಯಿಂದ ಕಾಮಗಾರಿಯನ್ನು ಮಾಡಿಕೊಳ್ಳಲು ತಿಳಿಸಿದರು. |

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಕುಶಾಲನಗರ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.


ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
ಉಪವಿಭಾಗ,ಕುಶಾಲನಗರ

